144

ಧುನಿರಾಣಿ ಗಂಗೆ

*

ಲೇಖಕರು:

ಶ್ರೀ। ಕೆ. ಸುಭಾಷ್ಚಂದ್ರ ಶೆಣೈ,

ಬದಿಯಡ್ಕ (ದ. ಕ.)

1957.

ಒಂದಾಣೆ ಮಾಲೆ

ಪ್ರಥಮವಾಗಿ........

ಸಕಲ ಲೋಕಪಾವನಿಯೂ, ಮಂಗಳತರಂಗಿಣಿಯೂ, ಭಗೀರಥ ತನುಜೆಯೂ, ಸಗರಾತ್ಮಜಾತ ಮುಕ್ತಿದಾಯಿನಿಯೂ ಆದ ಗಂಗಾದೇವಿಯ ಕಥೆ ಬಹಳ ಪವಿತ್ರವಾದುದು. ಭಾರತನಾಡಿನಲ್ಲಿ ಆಕೆಯ ಪಾತ್ರವಂತೂ ಬಹಳ ಶ್ರೇಷ್ಠತೆಯಿಂದ ಕೂಡಿದ್ದು! ಗಂಗಾನದಿಯು ಹರಿಯುವ ಪ್ರದೇಶವಂತೂ ಸಂಪತ್ತನ್ನೀಯುವ ಪ್ರದೇಶ! ಆಕೆಯ ಜಲವಂತೂ ಆರೋಗ್ಯಕ್ಕೆ ಯೋಗ್ಯ ಮದ್ದು! ಪವಿತ್ರತೆಯಲ್ಲೂ ಆಕೆಯ ಪಾತ್ರ ಹಿರಿದಾದುದು! "ಗಂಗಾಜಲದ ಬಿಂದುಮಾತ್ರವು ಮೇಲೆ ಬಿದ್ದರೆ ಬ್ರಹ್ಮಹತ್ಯಾದಿ ದೋಷಗಳು ಪರಿಹಾರವಾಗುವುವು. ಇಂಥ ತ್ರೈಲೋಕಪಾವನಿಯಾದ, ಅನೇಕ ಕೋಟಿ ಜನ್ಮಗಳಿಂದ ಅನುಸರಿಸಿ ಬಂದ ಪಾಪಸಮೂಹವನ್ನು ನಾಶಮಾಡುವಂಥಾ, ದರ್ಶನಮಾತ್ರದಿಂದಲೇ ಸಕಲ ದೋಷಗಳನ್ನು ದೂರಮಾಡುವಂಥಾ, ರಾಜಸ್ತ್ರೀಯರುಗಳು ಬಂದು ಸ್ನಾನಮಾಡಿದ ಮಾತ್ರದಿಂದಲೇ ಅವರ ಅಂಗ ಲೇಪಿತವಾದ ಮೃಗಮದವು ಕರಗಿ, ಆ ಮೃಗಗಳು ಕೂಡಾ ನಂದನವನದಲ್ಲಿ ನೃತ್ಯಮಾಡುವ ಮಹಿಮೆಯುಳ್ಳದ್ದು" ಎಂದು ಪುರಾತನಿಗಳೂ ಸಾರುವರು. ತದ್ರೀತಿಯಲ್ಲಿ ಗಂಗಾಜಲದ ಶ್ರೇಷ್ಠತೆಯನ್ನು ಆಧುನಿಕ ವಿಜ್ಞಾನಿಗಳೂ ಕೂಡಾ ಸಂಶೋಧನೆ ನಡೆಸಿರುವರು. ಇಂಥಹ ಗಂಗೆಯ ಶ್ರೇಷ್ಠತೆಯನ್ನು ನಾವು ಅರಿಯಲೇ ಬೇಕು. ಇದಕ್ಕಾಗಿ ಆಧಾರಸಹಿತ ಈ ಲೇಖನವನ್ನು ಸಕಲರೂ ಓದಿ ತಿಳಿಯಬೇಕೆಂದು 'ಒಂದಾಣೆ ಮಾಲೆ'ಗೆ ಬರೆದಿರುತ್ತೇನೆ. ಶಿಶುಸಾಹಿತ್ಯಕ್ಕಿದು ಅಮೂಲ್ಯ ಕಾಣಿಕೆ. ವಿದ್ಯಾರ್ಥಿಗಳಿಗಂತೂ ಇದ್ದು ಉಪಯುಕ್ತ ಲೇಖನ. ಪಾಠಕ್ಕೂ ಈ ಲೇಖನ ಶ್ರೇಷ್ಠವಾದುದೆಂದೇ ಹೇಳಬೇಕು. ಗಂಗೆಯ ಮಹಿಮಾ ಲೇಖನವನ್ನೂ ಆದಷ್ಟು ಸಂಗ್ರಹಿಸಿರುತ್ತೇನೆ. ಇನ್ನೂ ಸಿಕ್ಕಿದರೆ ಮುಂದೆ 'ಒಂದಾಣೆ ಮಾಲೆ'ಗೆ ಬರೆಯಬೇಕೆಂದಿರುವೆನು. ಕನ್ನಡಿಗರೆಲ್ಲರೂ ಇದನ್ನು ಆದರದಿಂದ ಸ್ವೀಕರಿಸಿ, ಪ್ರೋತ್ಸಾಹ ಕೊಡಬೇಕಾಗಿ ಬೇಡುತ್ತೇನೆ.

ಬದಿಯಡ್ಕ,
25—6—1957.

ಇಂತಿ ತಮ್ಮವ,
ಕೆ. ಸುಭಾಷ್ಚಂದ್ರ ಶೆಣೈ.

ಧುನಿರಾಣಿ ಗಂಗೆ

ಗಂಗೆ! ಭಾರತ ನಾಡಿನ ಪುಣ್ಯನದಿ! ಪುರಾಣಕಾಲದಿಂದಲೇ ಪ್ರಸಿದ್ಧಿ ಪಡೆದ ದೇವನದಿ ಗಂಗೆಯು ಇಕ್ಷ್ವಾಕುವಂಶದರಸನಾದ ಭಗೀರಥನ ಭಗೀರಥ ಪ್ರಯತ್ನದ ಫಲವಾಗಿ ಭಾರತಭೂಮಿಗೆ ದೊರತ ಕಾಣಿಕೆ!

ಭಗೀರಥನ ಮುತ್ತಜ್ಜಂದಿರಾದ ಅರವತ್ತು ಸಹಸ್ರ ಸಗರರು ಕಪಿಲ ಮುನಿಯ ಕೋಪಕ್ಕೆ ತುತ್ತಾಗಿ ಶಾಪದಿಂದ ಭಸ್ಮವಾಗಿ, ಸದ್ಗತಿ ಕಾಣದೆ ಇದ್ದರು. ಅವರ ಮುಕ್ತಿಗಾಗಿ ಭಗೀರಥನು ಘೋರ ತಪಸ್ಸನ್ನಾಚರಿಸಿ ಸುರಲೋಕದಿಂದ ತರಿಸಿ, ತನ್ನ ಮುತ್ತಜ್ಜಂದಿರ ಭಸ್ಮದ ಮೇಲೆ ಹಾದು ಹೋಗುವಂತೆ ಮಾಡಿ ಅವರೆಲ್ಲರಿಗೂ ಮುಕ್ತಿ ದೊರಕಿಸಿಕೊಟ್ಟು, ತಾನೂ ಪುಣ್ಯಕಟ್ಟಿಕೊಂಡನೆಂದು ಪುರಾಣೋಕ್ತ ಕಥೆಯಿದೆ.

ಗಂಗೆಗೆ ಭಗೀರಥನ ಪ್ರಯತ್ನದ ಕುರುಹಿಗಾಗಿ 'ಭಾಗೀರಥಿ' ಯೆಂದೂ, ಹರಿದುಬರುವಾಗ ಜಹ್ನುಮುನಿಯಿಂದ ಆಪೋಷಣಮಾಡಲ್ಪಟ್ಟು ಮತ್ತೆ ಅವನ ಕಿವಿಯಿಂದ ಹೊರಬಂದುದರಿಂದ 'ಜಾಹ್ನವಿ'ಯೆಂದೂ ಹೆಸರುಗಳಿವೆ.

ಸುರನದಿಯಾದ ಗಂಗೆಯು ತನ್ನನ್ನು ಆಶ್ರಯಿಸಿದಾತನ ಸಕಲ ಪಾಪವನ್ನೂ ಪರಿಹರಿಸುತ್ತಿರುವಳು. ಗಂಗೆಯಲ್ಲೊಮ್ಮೆ ಸ್ನಾನಗೈದರೆ ತಾನು ಬಾಳುವೆಯಲ್ಲಿ ಮಾಡಿದ ಪಾಪಕರ್ಮಗಳನ್ನೂ ತೊಳೆದು ಪುಣ್ಯಪುರುಷನಾಗುವೆನೆಂದು ಭಾವುಕನು ನಂಬುತ್ತಾನೆ.

ಶುಭ್ರತೆಯಲ್ಲಿ, ಸ್ವಚ್ಛತೆಯಲ್ಲಿ, ಸ್ವಾದಿಷ್ಟತೆಯಲ್ಲಿ, ರುಚಿಯಲ್ಲಿ, ಅಡಿಗೆ ಯೋಗ್ಯತೆಯಲ್ಲಿ, ಪೋಷಕತೆಯಲ್ಲಿ, ಪಾಪವಿಮೋಚನೆಯಲ್ಲಿ, ಪಚನಶಕ್ತಿಯಲ್ಲಿ, ಗಂಗಾಜಲವು ಮಹತ್ವದ ಸ್ಥಾನವನ್ನು ಗಳಿಸಿದೆ, ಅದು ಬುದ್ಧಿವರ್ಧಕವೂ ಆಗಿರುವುದು. ಈ ಕಾರಣದಿಂದಲೇ ಪೂರ್ವಜರು ಗಂಗಾನದಿಯ ನೀರನ್ನು 'ತೀರ್ಥ'ವೆಂದೆಣಿಸಿ ಅದನ್ನು ಪೂಜಿಸುತ್ತಾ ಬಂದಿರುವರು. ಪುಣೆಯಲ್ಲಿರುವ "Bhandarker Research Institute"ನಲ್ಲಿರುವ 'ಭೋಜನ ಕುತೂಹಲ' ಎಂಬ ಗ್ರಂಥದಲ್ಲಿ ಗಂಗಾನದಿಯ ಜಲದ ಗುಣದ ಕುರಿತು ವಿಸ್ತಾರವಾದ ಲೇಖನಗಳಿವೆ.

ಭಾರತವರ್ಷಾಳಿದ ಅನ್ಯಮತೀಯರು ಕೂಡ ಗಂಗೆಯ ಜಲವನ್ನು ಅತೀ ಉತ್ತಮವೆಂದು ಭಾವಿಸಿ, ಅದನ್ನು ಸ್ವೀಕರಿಸುತ್ತಿದ್ದರು. ಪರಮಾತ್ಮನಿತ್ತ ಪ್ರಸಾದವೆಂದೆಣಿಸುತ್ತಿದ್ದರು. ಅದನ್ನು ಅತೀ ಪವಿತ್ರತೆಯಿಂದ ನೋಡಿ ಪಾನಮಾಡುತ್ತಿದ್ದರು. ಹಿಂದೆ ಭಾರತವರ್ಷಾಳಿದ ಮಹಮ್ಮದ ತೊಗಲಕನು, ನಿಯಮಿತ ವೇಳೆಯಲ್ಲಿ ಗಂಗೆಯ ನೀರನ್ನು ಕುಡಿಯುತಿದ್ದನು. ದೌಲತಾಬಾದಿನಲ್ಲಿರುವ ಅವನು ಪ್ರತಿದಿನವೂ ತನ್ನ ಚಾರಕರಿಂದ ವಿಪರೀತ ವೆಚ್ಚವನ್ನೂ ಲೆಕ್ಕಿಸದೆ ಕಾಶಿದೇಶದಿಂದ ಗಂಗಾಜಲವನ್ನು ತರಿಸುತ್ತಿದ್ದನು. ಒಮ್ಮೆ ಗಂಗಾಜಲವನ್ನು ತರಲು ಹೋದ ಚಾರಕನು ನಲ್ವತ್ತು ದಿನಗಳ ಮೇಲೆ ಮರಳುತ್ತಿದ್ದನಂತೆ.

ಅಕಬರ ಬಾದಶಹನಿಗೂ ಗಂಗಾಜಲವೆಂದರೆ ಅತೀವ ಪ್ರೀತಿ. "ಅಮೃತಸೇವನೆಗಿಂತಲೂ ರುಚಿಕರ" ಎಂದು ಅವನು ಹೇಳಿದ್ದನು. ಗಂಗಾಜಲವು ತಪ್ಪದೆ ಸಿಗಬೇಕೆಂದು ಅವನು ತಕ್ಕ ವೇತನವಿತ್ತು ಪ್ರತ್ಯೇಕ ಅಧಿಕಾರಿಮಂಡಲವೊಂದನ್ನೆ ಮಾಡಿದ್ದನು. ಈ ಅಧಿಕಾರಿಗಳ ಮುಖಾಂತರ ಕೊಡಕೊಡಗಳಲ್ಲಿ ಗಂಗಾಜಲವು ಬೀಗಮುದ್ರಿತವಾಗಿ ಬಾದಶಹನಿಗೆ ಬರುತ್ತಿತ್ತು. ಕೇವಲ ಗಂಗಾಜಲವನ್ನೇ ಅವನು ಕುಡಿಯುತ್ತಿದ್ದನು. ಅವನ ಸ್ನಾನ, ಭೋಜನಗಳಿಗೆ ಗಂಗಾಜಲಮಿಶ್ರಿತ ನೀರು ಉಪಯೋಗಿಸಲ್ಪಡುತಿತ್ತು. ಮಿಶ್ರಿತ ನೀರಲ್ಲಿ ಗಂಗಾಜಲವು ಇಲ್ಲದಿದ್ದರೆ ಅಕಬರನು ತಕ್ಷಣ ಅಧಿಕಾರಿಗಳನ್ನು ದಂಡಿಸುತ್ತಿದ್ದನೆಂದು 'ಅಬುಲ ಫಜಲ'ನು ತನ್ನ 'ಅಯಿನೆ ಅಕಬರಿ' ಗ್ರಂಥದಲ್ಲಿ, ಅಕಬರನ ಗಂಗಾಜಲದ ಪ್ರೇಮವನ್ನು ಬಹುಚೆನ್ನಾಗಿ ವರ್ಣಿಸಿರುವನು.

ಹಿಂದೂ ಧರ್ಮದ ಕಡುವೈರಿಯಾಗಿ, ಹಿಂದೂ ಶ್ರೇಷ್ಠತೆಯನ್ನು ಅತೀ ಕ್ಷುಲ್ಲಕವಾಗಿ ಕಾಣುತ್ತಿದ್ದ ಔರಂಗಜೇಬನೂ ಕೂಡಾ ಗಂಗಾಜಲವಿಲ್ಲದೆ ಯಾವ ಆಹಾರವನ್ನೂ ಸ್ವೀಕರಿಸುತ್ತಿರಲಿಲ್ಲ. ಆತನ ದರಬಾರದ ಜನರೂ ಗಂಗಾಜಲವನ್ನು ಉಪಯೋಗಿಸಬೇಕೆಂದು ಅವನು ಆಜ್ಞೆ ವಿಧಿಸಿದ್ದನಂತೆ ಒಂಟೆಯ ಮೂಲಕ ಗಂಗಾಜಲವನ್ನು ತರಿಸುತ್ತಿದ್ದ ಅವನು, ತನ್ನ ಪ್ರಯಾಣಕಾಲದಲ್ಲೂ ಗಂಗಾಜಲವನ್ನು ಒಯ್ಯುತ್ತಿದ್ದನೆಂದು "ಬರ್ನಿಯರ" ಎಂಬ ಫ್ರೆಂಚ್ ಪ್ರವಾಸಿಯು ಬರೆದಿರುವನು.

ನವಾಬರು ಕೂಡ ಗಂಗಾಜಲವನ್ನು ಕುಡಿಯುತ್ತಿದ್ದರಲ್ಲದೆ ಲಗ್ನ

ಹಾಗೂ ಇತರ ವಿಶೇಷ ಸಮಾರಂಭಗಳಲ್ಲಿ ಗಂಗಾನೀರು ಪಾನಕದಂತೆ ಕೊಡಲ್ಪಡುತ್ತಿತ್ತು ಎಂದು ಭಾರತದ ಪ್ರವಾಸಗೈದ 'ಟಿವ್ಹರ್ನಿಯು' ಎಂಬ ಫ್ರೆಂಚ್ ಪ್ರವಾಸಿಯು ತನ್ನ ಪ್ರವಾಸ ಗ್ರಂಥದಲ್ಲಿ ಬರೆದಿರುವನು.

ಮಹಾರಾಷ್ಟ್ರೀಯರು ಗಂಗಾಜಲದ ಶ್ರೇಷ್ಠತೆಯನ್ನು ಎಂದೋ ಕಂಡುಕೊಂಡಿದ್ದರು. ಪೇಶ್ವೆಯರಿಗಾಗಿ ಬಹಳ ಹಣ ವೆಚ್ಚಮಾಡಿ ಗಂಗಾ ಜಲವನ್ನು ತರಿಸಿ ಪ್ರತಿಯೊಂದು ವಿಶೇಷ ಕಾರ್ಯಕ್ರಮಗಳಿಗಾಗಿ ಉಪ ಯೋಗಿಸುತ್ತಿದ್ದರು.

ಇಂಗ್ಲಿಷರ ಕಡುವೈರಿಯಾಗಿದ್ದ ಮೈಸೂರು ಹುಲಿ ಟಿಪ್ಪು ಸುಲ್ತಾನ ನಂತೂ ಗಂಗಾಜಲವನ್ನು ಶಕ್ಯವಿದ್ದಷ್ಟು ದೊರಕಿಸಿಕೊಂಡು ಉಪಯೋ ಗಿಸುತಿದ್ದನು. 'ಎಡ್ವರ್ಡ ಮೂರ' ಎಂಬಾತನೊಮ್ಮೆ ಟಿಪ್ಪು ಸುಲ್ತಾನ ನೊಂದಿಗೆ ಯುದ್ಧರಂಗದಲ್ಲಿರುವಾಗ ಆಗಾಗ್ಗೆ ಕೊಡಗಳಲ್ಲಿ ಬರುವ ನೀರನ್ನು ಕಂಡು ಆಶ್ಚರ್ಯಪಟ್ಟು, ಟಿಪ್ಪು ಸುಲ್ತಾನನೊಡನೆ ವಿಚಾರಿಸಿದಾಗ, 'ಸ್ಫೂರ್ತಿಯನ್ನೀಯುವ ಗಂಗಾಜಲ'ವೆಂದು ಉತ್ತರವನ್ನಿತ್ತನು. ಗಂಗಾ ಜಲವು ಟಿಪ್ಪು ಸುಲ್ತಾನನಿಗೆ ಪ್ರತಿಯೊಂದು ಕಾರ್ಯಕ್ಕೂ ಸ್ಫೂರ್ತಿದಾಯಕ ಪಾನೀಯವಾಗಿತ್ತು.

ಆರೋಗ್ಯದ ದೃಷ್ಟಿಯಲ್ಲೂ ಗಂಗಾಜಲವು ಅನಾದಿಕಾಲದಿಂದಲೂ ಮಹತ್ವವನ್ನು ಪಡೆದಿದೆ. ಯಾವ ಪಾತ್ರೆಯಲ್ಲೂ ಮುದ್ರೆಯೊತ್ತಿ ಇಟ್ಟ ಗಂಗಾಜಲವು ಹಲವು ವರ್ಷಗಳ ವರೆಗೆ ಕೆಡದೆ ಉಳಿಯುವುದು.

ಗಂಗಾಜಲದ ಸರ್ವೋತ್ಕೃಷ್ಟತೆಯ ಹಾಗೂ ಸತ್ಯಾಸತ್ಯತೆಗಳ ಬಗ್ಗೆ ಹೊರನಾಡುಗಳ ವಿಜ್ಞಾನಿಗಳು ಕೂಡ ಪರಿಶೋಧನೆ ನಡೆಸಿರುವರು. ಕೆನಡದ "ಮ್ಯಾಕಿಗಿಲ್ ವಿಶ್ವವಿದ್ಯಾನಿಲಯು"ದ Dr. F.C. Hareyson, ಫ್ರಾನ್ಸಿನ Dr. Hireyley, ಬ್ರಿಟೈನಿನ Dr. C. E. Nelson, F. R. C. S, ಇವರೆಲ್ಲರೂ ಗಂಗಾಜಲದ ಕುರಿತು ಸಂಶೋಧನೆ ನಡೆಸಿ, ಅದರಲ್ಲಿರುವ ರೋಗನಿವಾರಕ ಶಕ್ತಿಯನ್ನು ವಿವರಿಸಿರುವರು.

ಗಂಗಾನದಿಯ ಮುಖವಾದ ಹೂಗ್ಲಿ ನದಿಯು ಕಲ್ಕತ್ತೆಯಿಂದ, ಇಂಗ್ಲೆಂಡಿಗೆ ಹೋಗುವ ಹಡಗುಗಳಿಗೆ ಜಲವನ್ನೀಯುವ ಆಶ್ರಯ. ಆ ನೀರು ಇಂಗ್ಲೆಂಡನ್ನು ತಲಪುವ ವರೆಗೆ ಹಾಳಾಗದೆ, ಅಲ್ಲಿಯ ವರೆಗೆ ಪರಿಶುದ್ಧವಾಗಿದ್ದು ಈಗತಾನೇ ಪಡಕೊಂಡ ನೀರಿನಂತೆ ಉಳಿಯುವುದು.

ಒಮ್ಮೆ ಗಂಗಾನದಿಯ ನೀರನ್ನು ತುಂಬಿಸಿದರೆ ಇಂಗ್ಲೆಂಡಿನ ವರೆಗೆ ಬೇರೆ ನೀರು ಬದಲಾಯಿಸುವ ಆಗತ್ಯವೇ ಇರುವುದಿಲ್ಲ! ಆದರೆ ಇಂಗ್ಲೆಂಡಿನಿಂದ ಬರುವಾಗ ಮಾತ್ರ ಅಲ್ಲಲ್ಲಿ ನೀರನ್ನು ತುಂಬಿಸಬೇಕಾಗುವುದು. ಏಡನ್, ಪೋರ್ಟ್ ಸಯ್ಯದ್ ಮೊದಲಾದ ಕಡೆಗಳಲ್ಲಿ ಆಗಾಗ್ಗೆ ನೀರನ್ನು ಬದಲಾಯಿಸ ಬೇಕಾಗುವುದು.

ಗಂಗಾನದಿಯಲ್ಲಿ ತೇಲಿಬರುವ ವಸ್ತುಗಳಿಗೆ ಮಿತಿ ಇಲ್ಲ! ನಾಥಾ ಭಾಗದ ಕೊಳೆ ಕಲ್ಮಶಗಳೂ, ಕಾಲರಾ, ಅತಿಸಾರ ಮೊದಲಾದ ರೋಗ ದಿಂದ ಮಡಿದವರ ಶವಗಳೂ, ಅಸಹ್ಯ ವ್ಯಾಧಿಗಳಿಂದ ಪೀಡಿತರಾಗಿ ಆತ್ಮ ಹತ್ಯೆಗೈದು ಕೊಳೆತ ದೇಹಗಳೂ ತೇಲಿಬರುವುವಾದರೂ ಆ ನೀರಿನಲ್ಲಿ ಆ ರೋಗಾಣುಗಳು ನಾಶವಾಗುವುವು. ಇದರಿಂದ ಗಂಗಾನದಿಯ ನೀರು ಕ್ರಿಮಿನಾಶಕ ಶಕ್ತಿಯುಳ್ಳುದೆಂದು ಸಿದ್ಧಾಂತವಾಗಿದೆ.

ಡಾಕ್ಟರ್ ಹೆರೇಲಿ ಎಂಬವರು, ಕಠಿಣ ರೋಗಾಣುಗಳ ಮೇಲೆ ಗಂಗಾ ಜಲವನ್ನು ಹಾಕಿ ಪರೀಕ್ಷಿಸಿದಾಗ, ಕೆಲವೇ ಕ್ಷಣಗಳಲ್ಲಿ ಆ ವಿಷಾಣುಗಳು ನಾಶವಾಗಿರುವುದನ್ನು ಕಂಡು ಆಶ್ಚರ್ಯಪಟ್ಟಿದ್ದಾರೆ. ಪಾಶ್ಚಿಮಾತ್ಯರಲ್ಲಿ ಕೆಲವರು ಚರ್ಮರೋಗ ಚಿಕಿತ್ಸೆಗಾಗಿ ಈಗಲೂ ಗಂಗಾಜಲದ ನೀರನ್ನು ಉಪಯೋಗಿಸುವುದುಂಟು.

ವನಸ್ಪತಿ, ಔಷಧಿ ಮತ್ತು ಖನಿಜಪದಾರ್ಥಗಳ ತವರುಭೂಮಿಯಾದ ಹಿಮಾಲಯದ ತಪ್ಪಲುಪ್ರದೇಶವು ಗಂಗಾನದಿಗೂ ಉಗಮಸ್ಥಾನವಾದುದ ದರಿಂದ ಗಂಗಾತೀರ್ಥಕ್ಕೆ ಈ ಕ್ರಿಮಿನಾಶಕ ಗುಣವು ಬಂದಿರಬಹುದು. ಅದು ಹರಿದುಬರುವ ಪ್ರದೇಶಗಳಲ್ಲಿನ ಖನಿಜ ಲವಣಗಳೂ ಕೂಡಿಕೊಂಡು ಈ ಜಲವು ವಿಶೇಷ ಗುಣಗಳನ್ನು ಪಡೆದಿದೆ.

ಹಿಮಾಲಯ ತಪ್ಪಲಿನಿಂದ ಹೊರಡುವ ಗಂಗಾನದಿಯ ಜಲವು ಪುಣ್ಯಕಾರಕವೂ, ಹಿತಕಾರಕವೂ ಎಂದು ಎರಡುಸಹಸ್ರ ವರ್ಷಗಳ ಹಿಂದೆಯೇ 'ಚರಕ'ನೆಂಬ ಆಯುರ್ವೇದ ವಿಶಾರದನು ಬರೆದಿರುವನು. ಹಿಮಗಿರಿಯಿಂದ ಉಗಮವಾಗಿ ಹರಿಯುವ ನೀರು ಸ್ಥಿರವೂ ಹಾಗೂ ಪಥ್ಯ ಕಾರಕವೂ ಆಗಿರುವುದೆಂದು 'ಅಷ್ಟಾಂಗಹೃದಯ'ದಲ್ಲಿ 'ವಾಗ್ಭಟ'ನು ತಿಳಿ ಸಿರುವನು. ಗಂಗಾಜಲವು ಲಘುವಾಗಿದ್ದು, ಪಚನಕ್ಕೆ ಸಹಾಯಕಾರಿ ಎಂದು ಸಹ ಆತನು ಸಾರಿರುವನು.

ಗಂಗಾನದಿಯು ಸೌಂದರ್ಯವಂತೂ ಜಗತ್ಪ್ರಸಿದ್ಧಿ ಹೊಂದಿದೆ.

ಧುನಿರಾಣಿ ಗಂಗೆಯು ನಿನಗೆ
ನೆನಪಿಹುದೇನಾ ಶುಭಗಳಿಗೆ
ಇಳಿದಂದು ನಿನ್ನಯ ದಡದಿ
ಮುನ್ನಮೆಮ್ಮ ಸರಿಸೆಯ ಸರಣಿ

ಎಂದು ಶ್ರೀ। ಗೋವಿಂದ ಪೈಗಳು ಬರೆದಂತೆ, ಮಹಾಕವಿ ಕಾಳಿದಾಸನೂ ಸೌಂದರ್ಯದಲ್ಲಿ ಗಂಗಾನದಿಯುನ್ನು ಸುಂದರವಾಗಿ ವರ್ಣಿಸಿರುವನು. ಆ ಸೌಂದರ್ಯದ ವೈಶಿಷ್ಟದ ಕುರಿತು—

ಮುತ್ತಿನ ಕೋಲಿಗೆ ಅಲ್ಲಲ್ಲಿ ನೀಲದ
ಮಣಿಗಳ ಕೋದಂತೆ ಒಂದೆಡೆಗೆ,
ಬಿಳುದಾವರೆಗಳ ಮಾಲೆಯೊಳಲಲ್ಲಿ
ನೈದಿಲೆಗಳನಿಟ್ಟಂತಿನ್ನೊಂದೆಡೆ,
ಕೆಲವೆಡೆ ಹಾರು ಮಾನಸಹಂಸಗ
ಳೋಳಿ ನೋಡಗಳಲ್ಲಿ ಬೆರೆತಂತೆ,
ಬೇರೊಮ್ಮೆ ಶರದದ ಬಿಳಿ ಮೋಡದೆಡೆಯಲ್ಲಿ
ಬಾನ್ನೀಲವಲ್ಲಲ್ಲಿ ಹಣಕಿದಂತೆ,
ಮತ್ತೊಮ್ಮೆ ಕಾಳಸರ್ಪಗಳನ್ನು ತೊಟ್ಟಂಥ
ಭಸ್ಮಭೂಷಿತ ಶಿವತನುವಿನಂತೆ,
ಯಮುನೆಯ ತೆರೆಗಳನಪ್ಪಿದ ಗಂಗೆಯ
ಸೊಬಗ ನಾನೇನೆಂಬೆ ನೋಡೆ ಕಾಂತೆ—

ಎಂದು ರಘುವಂಶದಲ್ಲಿ ಗಂಗೆಯ ಸೊಬಗನ್ನಂತೂ ಅಂದವಾಗಿ, ಮನಸ್ಸನ್ನಾಕರ್ಷಿಸುವಂತೆ ವರ್ಣಿಸಿರುವನು.

ಕೃಷ್ಣನಾಳಿದ ಸೌರಾಷ್ಟ್ರದಲ್ಲಿರುವ ಭಾರತೀಯರ ಪವಿತ್ರದೇಗುಲವಾದ ಸೋಮನಾಥ ದೇವಾಲಯಕ್ಕೆ ದೇವರ ಅಭಿಷೇಕಕ್ಕಾಗಿ ಪ್ರತಿದಿನವೂ ಗಂಗಾಜಲವನ್ನು ತರಿಸುತ್ತಿದ್ದರು.

ನಿಸರ್ಗರಮ್ಯತೆಯಲ್ಲೂ ಪ್ರಸಿದ್ಧಿಪಟ್ಟ ಗಂಗಾನದಿಯ ಇಕ್ಕಡೆಗಳ ಪ್ರದೇಶವು ಸಂಪತ್ತಿನಲ್ಲೂ ಪ್ರಸಿದ್ಧಿ ಹೊಂದಿರುವುದು.

ಭಾರತದಲ್ಲಿ ಗಂಗಾನದಿಯು ಮುಖ್ಯವಾದ ನದಿಯಾಗಿರುವುದು. ಯಮುನಾನದಿಯು ಅದರ ಬಲದ ಉಪನದಿಯು. ಗೋಗ್ರಾ, ಗಂಡಕಿ ಮತ್ತು ಕೋಶಿನದಿಗಳು ಎಡದ ಉಪನದಿಗಳು. ಗಂಗೆಯು ಗಂಗೋತ್ರಿ ಎಂಬ ಹಿಮನದಿಯಲ್ಲಿ ಹುಟ್ಟಿ, ಹರಿದ್ವಾರದ ಬಳಿ ಪರ್ವತ ಪ್ರದೇಶವನ್ನು ತ್ಯಜಿಸಿ, ಬಯಲಿಗೆ ಇಳಿವುದು. ಪ್ರಯಾಗದ ಬಳಿ ಯಮುನೆಯನ್ನು ಕೂಡಿಕೊಂಡು, ಪೂರ್ವಕ್ಕೆ ಹರಿದು, ಬಂಗಾಳದಲ್ಲಿ ಆಗ್ನೇಯ ದಿಕ್ಕನ್ನು ಹಿಡಿದು, ಬಂಗಾಳಕೊಲ್ಲಿಯನ್ನು ಸೇರುವುದು. ಬಯಲಿನಲ್ಲಿ ಈ ನದಿಗಳು ತಂದು ಸಂಚಯನ ಮಾಡಿದ ಫಲವತ್ತಾದ ಮಣ್ಣು ಇದೆ. ಇದರ ಬಯಲು ಭೂಮಿ ಸಮತಟ್ಟಾಗಿದ್ದು ಎಲ್ಲಿಯೂ ಒಂದೇ ಒಂದು ಗುಡ್ಡವೂ ಇಲ್ಲವಾಗಿದೆ. ನಮ್ಮ ನಾಡಿನ ಪೂರ್ವಭಾಗದಲ್ಲಿ ಬ್ರಹ್ಮಪುತ್ರಾ ನದಿಯೂ ಅಸ್ಸಾಮಿನಿಂದ ಹರಿದು ದಕ್ಷಿಣಕ್ಕೆ ಬಂದು ಗಂಗಾನದಿಯನ್ನು ಕೂಡಿಕೊಳ್ಳುವುದು.

ಗಂಗಾನದಿಯ ಉತ್ತರ ಬಯಲಿನಲ್ಲಿ ಗಂಗಾನದಿಯ ಕಾಲುವೆಗಳೂ, ಪೂರ್ವ ಯಮುನಾನದಿಯ ಕಾಲುವೆಯೂ, ಆಗ್ರಾ ಕಾಲುವೆಯೂ ಇವೆ. ಗಂಗಾಬಯಲು ಅತೀ ಸಾಂದ್ರತೆಯಿಂದ ಕೂಡಿದ ಬಯಲು. ಇದರ ಮೈಲಿಗೆ ನಾಲ್ಕುನೂರು ಜನರಂತೆ ಇದ್ದು, ನೆಲವು ಸಮತಟ್ಟಾಗಿ ನೀರಾಶ್ರಯವು ಉತ್ತಮವಾಗಿದೆ. ಬೆಳೆಗಳಿಗೆ ಅವಶ್ಯವಿರುವ ಉಷ್ಣವೂ ದೊರಕುವುದು. ಈ ಬಯಲುಪ್ರದೇಶದಲ್ಲಿ ಗೋಧಿ, ನವಣೆ ಮತ್ತು ಅಕ್ಕಿಯ ಬೆಳೆಗಳಾಗುತ್ತವೆ. ಸಮತಟ್ಟಾಗಿ ಫಲವತ್ತಾದ ಮಣ್ಣಿನಿಂದ ಕೂಡಿದ ಗಂಗಾ ಬಯಲು ಭಾಗದಲ್ಲಿ ಡಿಲ್ಲಿಯ ಬಳಿ ಆರನೂರು ಅಡಿ ಎತ್ತರವಿರುವ ಒಂದು 'ನೀರನೆತ್ತಿ' ಸ್ಥಳವೂ ಇದೆ. ಈ ಸ್ಥಳವು ಗಂಗಾ ಮತ್ತು ಸಿಂಧೂನದಿಯ ಬಯಲನ್ನು ಎರಡು ವಿಭಾಗ ಮಾಡುತ್ತದೆ. ಗಂಗಾಬಯಲಿನಲ್ಲಿ ಸಂಯುಕ್ತ ಪ್ರಾಂತ್ಯ, ಬಿಹಾರ, ಪೂರ್ವ ಮತ್ತು ಪಶ್ಚಿಮ ಬಂಗಾಳ ಹಾಗೂ ಅಸ್ಸಾಮ ಪ್ರಾಂತ್ಯಗಳು ಇವೆ. ಭಾರತದಲ್ಲಿರುವ ಭೂಸ್ವರೂಪವನ್ನಾಧರಿಸಿ ಸ್ವಾಭಾವಿಕ ಪ್ರದೇಶದಲ್ಲಿ ಗಂಗಾನದಿಯ ಬಯಲೂ ಒಂದಾಗಿದೆ.

ಗಂಗಾನದಿಯ ಮುಖಜಭೂಮಿಯಲ್ಲಿ ಜಗತ್‌ಪ್ರಸಿದ್ಧಿಪಟ್ಟ ಗೋಣಿ ನಾರು ಹೇರಳವಾಗಿ ಬೆಳೆಯುತ್ತದೆ. ಅಧಿಕ ಉಷ್ಣವೂ, ಹೇರಳ ನೀರೂ ಅತ್ಯವಶ್ಯವಾಗಿ (ಅಕ್ಕಿ ಮತ್ತು ಕಬ್ಬಿಗೆ ಬೇಕಾದ ನೀರಿಗಿಂತ ಹೆಚ್ಚು ನೀರು) ಆಗತ್ಯವಿರುವ ಈ ಬೆಳೆಗೆ, ಗಂಗಾನದಿಯ ಮುಖಜಪ್ರದೇಶವು ಅತ್ಯುಪಯು

ಕ್ತವಾಗಿದೆ. ಮಾರ್ಚಿ ಮತ್ತು ಎಪ್ರಿಲ್ ತಿಂಗಳಲ್ಲಿ ಈ ಗೋಣಿನಾರ ಬಿತ್ತನ್ನು ಹಾಕಿದರೆ, ಸಪ್ಟಂಬರ ತಿಂಗಳಲ್ಲಿ ಇದನ್ನು ಕೊಯ್ಯಲು ಸಿದ್ಧವಾಗುತ್ತದೆ. ಗಿಡಗಳನ್ನು ಕಡಿದು, ಕಾಂಡದಿಂದ ನಾರನ್ನು ತೆಗೆದು, ಒಣಗಿಸಿ, ಗೋಣಿ ಚೀಲ ಮಾಡುತ್ತಾರೆ. ಉಳಿದ ಹೆಚ್ಚಿನಂಶವನ್ನು ಸ್ಕೊಟ್ಲೆಂಡಿಗೆ ರಫ್ತು ಮಾಡುತ್ತಾರೆ. ಈ ಉದ್ಯಮವು ಅತ್ಯಂತ ಲಾಭದಾಯಕವಾಗಿರುವುದು. ಭಾರತದ ವಿಭಜನೆಯ ವೇಳೆ, ಈ ಬೆಳೆಬರುವ ಹೆಚ್ಚಿನ ಸ್ಥಳವು ಪಾಕಿಸ್ತಾನಕ್ಕೆ ಸೇರಿದರೂ, ಗೋಣಿ ಸಿದ್ಧಗೊಳಿಸುವ ಕಾರ್ಖಾನೆಗಳು ಮಾತ್ರ ಭಾರತದ ಕಲ್ಕತ್ತದಲ್ಲಿ ಉಳಿದುವು. ನಮ್ಮ ಸರಕಾರದವರು ಈ ಕೊರತೆಯನ್ನು ತುಂಬಿಸಿಕೊಳ್ಳುವುದಕ್ಕಾಗಿ ಅಸ್ಸಾಮು ಮತ್ತು ಬಿಹಾರ ಪ್ರಾಂತ್ಯಗಳಲ್ಲಿ ಗೋಣಿನಾರನ್ನು ಬೆಳೆಸಲು ಆರಂಭಿಸಿ, ಆ ಕೊರತೆಯನ್ನು ಬಹುಮಟ್ಟಿಗೆ ನೀಗಿಸಿರುವರು.

ನಮ್ಮ ದೇಶದ ಪ್ರಮುಖ ಬಂದರುಗಳಲ್ಲಿ ಕಲ್ಕತ್ತೆಯು ಒಂದು. ಗಂಗಾ ನದಿಯ ಬಯಲು ಇದರ ಹಿನ್ನಾಡಾಗಿದೆ. ಗಂಗಾನದಿ ಬಯಲಿನಿಂದ 'ಗ್ರೇಂಡ್‌ಟ್ರಂಕ್' ಮಾರ್ಗವೊಂದು ಕಲ್ಕತ್ತೆಯಿಂದ ಪೇಶಾವರದ ವರೆಗೂ ಹಾದುಹೋಗುತ್ತದೆ. ಕಲ್ಕತ್ತೆಯಿಂದ ಕರಾವಳಿಯಾಗಿ ಮದ್ರಾಸಿಗೆ ಇನ್ನೊಂದು ರಸ್ತೆಯೂ ಇದೆ. ಈ. ಆರ್. (ಪೂರ್ವ ಪ್ರದೇಶದ ರೈಲ್ವೆ) ಎಂಬ ರೈಲ್ವೆಯು ಪಾಟ್ನಾ, ಅಲಹಾಬಾದ್, ಧಿಲ್ಲಿ ಮತ್ತು ಅಂಬಾಲಾ ಪಟ್ಟಣದ ವರೆಗೆ ಚಾಚಿದೆ. ಈ ರೈಲ್ವೆಯು ಗಂಗಾನದಿಯ ದಕ್ಷಿಣದಿಂದ ಹೋಗುವುದು.

ಗಂಗೆಯ ಬಯಲು ಪ್ರದೇಶವು ಯಮುನಾ ನದಿಯಿಂದೊಡಗೂಡಿ, ಉಪನದಿಗಳಾದ ಗೋಮತಿ, ಗೋಗ್ರಾ, ಗಂಡಕಿ ಮತ್ತು ಸೋನಾ ನದಿಗಳಿಂದಲೂ ನೀರನ್ನು ಮತ್ತು ಫಲವತ್ತಾದ ಮಣ್ಣನ್ನು ಪಡೆಯುತ್ತದೆ. ಆ ಸಂಪತ್ಸಮೃದ್ಧ ಹಾಗೂ ವಿಶಾಲವಾದ ಪ್ರದೇಶದ ಉತ್ತರಕ್ಕೆ ಹಿಮಾಲಯ ತಪ್ಪಲು ಪ್ರದೇಶವಿದೆ. ದಕ್ಷಿಣಕ್ಕೆ ವಿಂಧ್ಯಾ ಪರ್ವತ; ಧಿಲ್ಲಿಯ ನೀರನೆತ್ತಿ ಪಶ್ಚಿಮದಲ್ಲಿ; ಪಡ್ಕಾಲ ಮತ್ತು ಲುಷೆ ಬೆಟ್ಟಗಳು ಪೂರ್ವದಲ್ಲಿವೆ.

ಗಂಗಾ ಬಯಲುಪ್ರದೇಶವು ಅಧಿಕ ಉಷ್ಣತೆಯುಳ್ಳ ಪ್ರದೇಶವಾಗಿದೆ. ಬೇಸಿಗೆಯ ಕಾಲದಲ್ಲಿ ಕರಾವಳಿಯಿಂದ ಒಳನಡೆದಂತೆ ಉಷ್ಣತೆಯೂ ಜಾಸ್ತಿಯಾಗುತ್ತಾ ಹೋಗುತ್ತದೆ. ಚಳಿಗಾಲದಲ್ಲಿ ಅತೀವ ಚಳಿ. ಬೇಸಗೆಯಲ್ಲಿ

ಆಗ್ನೇಯ ಮುಸೂನ್ ಗಾಳಿ ಬೀಸಿ, ಮಳೆಬರುವಂತೆ ಮಾಡುವುದು. ಪೂರ್ವ ದಿಂದ ಪಶ್ಚಿಮಕ್ಕೆ ಬಂದ ಹಾಗೆ ಉಷ್ಣಮಾನದ ಅಂತರವು ಹೆಚ್ಚು ಹೆಚ್ಚು ಆಗುವುದು.

ಗಂಗೆಯ ಬಯಲು ಮೂರು ವಿಭಾಗಗಳಿಂದ ಕೂಡಿರುವುದು. ಮಳೆಯ ಹಂಚಿಕೆಯ ದೃಷ್ಟಿಯಲ್ಲಿ ಈ ವಿಭಾಗವು ಮಾಡಲ್ಪಟ್ಟಿರುವುದು. ಪ್ರಥಮ ವಿಭಾಗವನ್ನು 'ಮೇಲಣ ಗಂಗಾ ಬಯಲು' ಎನ್ನುವರು. ಸಂಯುಕ್ತ ಪ್ರಾಂತ್ಯವಿರುವ ಈ ಬಯಲು ಢಿಲ್ಲಿಯಿಂದ ಅಲಹಾಬಾದಿನ ವರೆಗೆ ಚಾಚಿ, ನಲ್ವತ್ತು ಇಂಚಿಗಿಂತಲೂ ಹೆಚ್ಚು ಮಳೆಯನ್ನು ಪಡಕೊಳ್ಳುತ್ತದೆ.

ಮಧ್ಯ ಬಯಲೇ ಎರಡನೇ ವಿಭಾಗ. ಬಿಹಾರು ಪ್ರಾಂತ್ಯವನ್ನೊಡಗೂಡಿದ ಈ ವಿಭಾಗವು ಅಲಹಾಬಾದಿನಿಂದ ರಾಜಮಹಲ್ ಬೆಟ್ಟಗಳ ವರೆಗೆ ವಿಸ್ತರಿಸಿ ಅರವತ್ತು ಇಂಚುಗಳ ವರೆಗೆ ಮಳೆಯನ್ನು ಪಡಕೊಳ್ಳುತ್ತದೆ.

ಕೆಳಗಿನ ಬಯಲು ಮೂರನೇ ವಿಭಾಗ. ಇಲ್ಲಿ ಮಳೆಯು ವರ್ಷಕ್ಕೆ ಎಂಭತ್ತು ಇಂಚು. ಗಂಗಾನದಿ ಮುಖಜಭೂಮಿಯ ವರೆಗೆ ಚಾಚಿದ ಈ ಬಯಲು ಪಶ್ಚಿಮ ಮತ್ತು ಪೂರ್ವ ಬಂಗಾಳ ಪ್ರಾಂತ್ಯವನ್ನೊಳಗೊಂಡಿರುವುದು. (ಪೂರ್ವ ಬಂಗಾಳವು ಪಾಕಿಸ್ಥಾನಕ್ಕೆ ಸೇರಿದೆ.)

ಗಂಗಾನದಿಯ ಬಯಲಲ್ಲಿ ವಾಸಿಸುವ ಜನರು ಹೆಚ್ಚಾಗಿ ಬೇಸಾಯ ಮಾಡಿ ಜೀವಿಸುವವರೇ ಆಗಿರುವರು. ಗೋಧಿ, ಜವೆಗೋಧಿ, ಕಬ್ಬು ಮತ್ತು ನವಣೆಯ ಬೆಳೆಯನ್ನು ನೀರಾವರಿಯ ಮೂಲಕ ಸಂಯುಕ್ತಪ್ರಾಂತ್ಯದವರು ಮಾಡುತ್ತಾರೆ. ಚಳಿಗಾಲದಲ್ಲಿ ಗೋಧಿಯ ಬೆಳೆಯನ್ನೂ ಬೇಸಗೆಯಲ್ಲಿ ಹತ್ತಿಯನ್ನೂ ಬೆಳೆಸುತ್ತಾರೆ. ಬಿಹಾರ್ ಪ್ರಾಂತ್ಯದಲ್ಲಿ ಎಣ್ಣೆಕಾಳು, ಗೋಧಿ, ಅಕ್ಕಿ, ಜವೆಗೋಧಿಯನ್ನೂ ಧಾರಾಳವಾಗಿ ಬೆಳೆಸುವರು. ಕಬ್ಬು, ಹೊಗೆಸೊಪ್ಪು ಕೂಡ ಇಲ್ಲಿ ವಿಪುಲವಾಗಿ ಬೆಳೆಯುತ್ತದೆ. ಪಶ್ಚಿಮ ಬಂಗಾಲವು ಅಕ್ಕಿ ಬೆಳೆಗೆ ಪ್ರಾಧಾನ್ಯತೆ ಹೊಂದಿದರೆ, ಪೂರ್ವ ಬಂಗಾಳವು ಗೋಣಿ ನಾರಿಗೆ ಹೆಸರುಹೊಂದಿದೆ.

ಢಿಲ್ಲಿ ನಗರವು ಗಂಗಾ ಬಯಲಿನ ಪಟ್ಟಣಗಳಲ್ಲಿ ಪ್ರಮುಖ ನಗರವಾಗಿದ್ದು, ಭಾರತದ ರಾಜಧಾನಿಯಾಗಿದೆ. ಆಗ್ರಾ ಪಟ್ಟಣವು ಗಂಗಾನದಿಯ ಬಯಲಿನಲ್ಲಿದ್ದು, ಜಗತ್ ಪ್ರಸಿದ್ಧವಾದ ತಾಜಮಹಲ್ ಇಲ್ಲಿದೆ. ಬನಾರಸ ಪಟ್ಟಣವು ಗಂಗೆಯ ದಡದಲ್ಲಿದ್ದು, ಜಗತ್ತಿನ ಅತ್ಯಂತ ಪ್ರಾಚೀನ ನಗರವೂ

ವಿದ್ಯಾಕೇಂದ್ರವೂ ಎನಿಸಿದೆ. ಹಿಂದೂಗಳ ಪ್ರಾಮುಖ್ಯ ಯಾತ್ರಾಸ್ಥಳವಿದು. ಅಲಹಾಬಾದು ಇನ್ನೊಂದು ಪ್ರಮುಖಪಟ್ಟಣ. ರೈಲ್ವೆ ಹಾಗೂ ಕೈಗಾರಿಕಾ ಕೇಂದ್ರವಾಗಿ ಲಕ್ನೋ ಮತ್ತು ಕಾನಪುರ ಪಟ್ಟಣಗಳು ಪ್ರಸಿದ್ಧಿಹೊಂದಿವೆ. ಬಿಹಾರಿನ ಮುಖ್ಯಪಟ್ಟಣವು ಪಾಟ್ನಾ. ಇದು ಹಿಂದೆ 'ಪಾಟಲೀಪುತ್ರ'ವೆಂದು ಹೆಸರಾಗಿದ್ದು, ಮೌರ್ಯರ ಹಾಗೂ ಅಶೋಕನ ರಾಜಧಾನಿಯಾಗಿತ್ತು. ಈ ಪಟ್ಟಣವು ಅಕ್ಕಿಗೆ ಒಂದು ದೊಡ್ಡ ಕೇಂದ್ರವಾಗಿದೆ. ಪಶ್ಚಿಮ ಬಂಗಾಲದ ಕಲ್ಕತ್ತಾ ನಗರವು ಬ್ರಿಟಿಷರ ಕಾಲದಿಂದ ದೊಡ್ಡ ನಗರವಾಗಿ ಕೈಗಾರಿಕಾ ಕೇಂದ್ರವಾಗಿದೆ. (ಪಾಕಿಸ್ಥಾನವಾಗಿದ್ದ ಪಶ್ಚಿಮ ಬಂಗಾಲಕ್ಕೆ ಡಾಕ್ಕಾ ನಗರವೇ ಮುಖ್ಯಪಟ್ಟಣವಾಗಿದ್ದು, ಚಿತ್ತಗಾಂಗ್ ಬಂದರದಿಂದ ಮತ್ತಷ್ಟು ಪ್ರಸಿದ್ಧಿಹೊಂದಿ, ಗಂಗಾನದಿಯ ಬಯಲು ಪ್ರದೇಶದ ಕೀರ್ತಿಯನ್ನು ಎತ್ತಿಹಿಡಿದಿದೆ.)

ಭಾರತಕ್ಕೆ ಬಂದು ಆಳಿದ ಪ್ರಥಮ ಮೊಗಲ ಬಾಬರನು ಬಿಹಾರಿನ ಅಫಘಾನರನ್ನೂ, ಬಂಗಾಳದ ಅರಸರನ್ನೂ ಗೋಗ್ರಾ ನದಿಯ ದಡದಲ್ಲಿ ಸೋಲಿಸಿದ ಬಳಿಕ, ಗಂಗಾ ಬಯಲಿನ ಸಂಪತ್ತನ್ನು ಕಂಡು ತನ್ನ ರಾಜ್ಯ ವಿಸ್ತರಿಸುವ ಕಾರ್ಯವನ್ನು ಮುಗಿಸಿದ್ದನಂತೆ!

ಆರ್ಯರು ಗಂಗಾನದಿ ಬಯಲಿಗೆ ಬಂದನಂತರವೇ ಗಂಗಾನದಿಯ ಸ್ಥಳಗಳಿಗೆ ಮಹತ್ವಬಂತು! ಇವರು ನೆಲಸಿದ ಗಂಗಾನದಿಯ ರಾಜ್ಯವೆಲ್ಲಾ ಪವಿತ್ರ ಪ್ರದೇಶವಾಯಿತು! ಪಟ್ಟಣಗಳು ಪವಿತ್ರ ಯಾತ್ರಾಸ್ಥಳಗಳಾದುವು! ಗಂಗಾನದಿಯ ಬಯಲಿನಲ್ಲಿ ಆರ್ಯರು ನೆಲಸಿದ ತರುವಾಯವೇ ಕ್ಷತ್ರಿಯ, ಬ್ರಾಹ್ಮಣ, ವೈಶ್ಯ ಮತ್ತು ಶೂದ್ರ ಎಂಬುದಾಗಿ ಚತುರ್ವರ್ಣಗಳು ಉಂಟಾದುವೆಂದು ಚರಿತ್ರೆಯ ಮೂಲಕ ನಮಗೆ ತಿಳಿದುಬರುತ್ತದೆ.

ಗಂಗೆಯು ಪ್ರಾತಃಸ್ಮರಣೀಯಳು. ಪ್ರಾತಃಕಾಲದಲ್ಲಿ ಆಕೆಯ ಸ್ಮರಣೆ ಪಾಪಉಚ್ಚಾಟನೆ ಮಾಡಿ, ಮುಕ್ತಿಪ್ರದಾಯಕಳವೆನಿಸುವುದೆಂದು ನಮ್ಮ ಪೂರ್ವಜರು ಹೇಳಿರುವರು. ವಾಲ್ಮೀಕಿ ಕೃತ "ಗಂಗಾಷ್ಟಕ"ದಲ್ಲಿ,

ವಿತತ್ತಾಲ ತಮಾಲಸಾಲ ಸರಲವ್ಯಾಲೋಲವಲ್ಲಲತಾ
ಛನ್ನಂ ಸೂರ್ಯಕರ ಪ್ರತಾಪರಹಿತಂ ಶಂಖೇಂದು ಕುಂದೋಜ್ವಲಂ।
ಗಂಧರ್ವಾಮರ ಸಿದ್ಧ ಕಿನ್ನರ ವಧೂತ್ತುಂಗಸ್ತನಾಸ್ಫಾಲಿತಂ
ಸ್ನಾನಾಯ ಪ್ರತಿವಾಸರಂ ಭವತು ಮೇ ಗಾಂಗಂ ಜಲಂ ನಿರ್ಮಲಂ॥

ಎಂದು ಹೇಳಲಾಗಿದೆ. ಶ್ರೀಮಚ್ಛಂಕರಾಚಾರ್ಯರ ವಿರಚಿತ ಗಾಂಗಾಷ್ಟಕ ದಲ್ಲಿ ಹೀಗಿದೆ:

ಮಾತರ್ಜಾಹ್ನವಿ ಶಂಭುಃ ಸಂಗಮಿಲಿತೇ ಮೌಳೌನಿಧಾಯಾಂಜಲಿಂ |
ತ್ವತ್ತೀರೇವ ಪುಷೋಽವಸಾನಸಮಯೇ ನಾರಾಯಣಾಂಘ್ರಿದ್ವಯಮ್ |
ಸಾನಂದಂ ಸ್ಮರತೋ ಭವಿಷ್ಯತಿ ಮಮಃಪ್ರಾಣಪ್ರಯಾಣೋತ್ಸವೇ |
ಭೂಯಾದ್ಭಕ್ತಿರವಿಚ್ಯುತಾ ಹರಿ ಹರಾದ್ವೈತಾತ್ಮಿಕಾಶಾಶ್ವತಿ ||

..............ಷ್ಟಕಂ ಯಃ ಪಠೇತ್ಪ್ರಯತೋ ನರಃ | ಸರ್ವ ಪಾಪವಿನಿ-ರ್ಮುಕ್ತೋ ವಿಷ್ಣುಲೋಕಂ ಸಗಚ್ಛತಿ |

ಗಂಗಾನದಿಯ ಪ್ರದೇಶದಲ್ಲಿ ಮಹಾಕ್ಷೇತ್ರಗಳಿವೆ. ಇಲ್ಲಿ ಮಹಾಪುರುಷರು ಜನಿಸಿದ್ದಾರೆ. ಗಂಗೆಯ ಪುತ್ರ ಭೀಷ್ಮನು ಯೋದ್ಧರಲ್ಲಿ ಉದ್ದಾಮನಾಗಿಯೂ, ಭಾಗವತ್ ಶಿರೋಮಣಿಯಾಗಿಯೂ, ಸತ್ಯಸಂಧನಾಗಿಯೂ, ಇಚ್ಛಾಮರಣಿಯಾಗಿಯೂ ಪ್ರಖ್ಯಾತನಾಗಿರುವನು.

ಗಂಗೆಯ ಮಹತ್ವದಲ್ಲಿ ಗಂಗೆ ಮತ್ತು ಆಕೆಯನ್ನು ತೆಗಳಿ ತನ್ನ ಕಾರ್ಯ ಸಾಧಿಸಿದ ಜ್ವಾಲೆಯ ಕತೆಯೂ ನೆನಪಿಗೆ ಬರುವುದು. ಅರ್ಜುನನು, ತನ್ನ ಮಕ್ಕಳನ್ನು ಕೊಂದು ಗಂಡನನ್ನು ಯುದ್ಧದಲ್ಲಿ ಸೋಲಿಸಿದುದರಿಂದ ಅವಮಾನಿತಳೂ, ದುಃಖಿತಳೂ ಆದ ಮಾಹಿಷ್ಮತಿ ನಗರದರಸನಾದ ನೀಲಧ್ವಜನ ಪತ್ನಿ ಜ್ವಾಲೆಯು, ಸಹೋದರ ಉನ್ಮುಖನ ಸಹಾಯ ಕೋರಿದಳು. ಅವನಿಂದಲೂ ಅವಮಾನಿತಳಾಗಿ ತಿರಸ್ಕರಿಸಲ್ಪಟ್ಟು, ಗಂಗೆಯಿಂದಲಾದರೂ ತನ್ನ ಅವಮಾನದ ಸೇಡನ್ನು ತೀರಿಸಬೇಕೆಂದು ಗಂಗಾತಟಕ್ಕೆ ಬಂದಳು. ಆದರೆ, ಗಂಗೆಯಲ್ಲಿ ಮಿಂದು ತನ್ನ ಪಾಪ ಪರಿಹರಿಸುವ ಗೋಜಿಗೆ ಹೋಗದೆ, ಅಲ್ಲಿರುವವರೊಡನೆ, 'ಈ ಗಂಗೆಯ ಜಲವನ್ನು ಸ್ಪರ್ಶಿಸದೆ ಈ ಗಂಗೆಯನ್ನು ದಾಟಿಸುವವರಾರು?' ಎಂದು ಕೋಪದಿಂದ ಪ್ರಶ್ನಿಸಹತ್ತಿದಳು. ಇದನ್ನು ಕೇಳಿದವರು 'ಸರ್ವಜನವಂದಿತಳೂ, ಪರಮಪೂಜ್ಯಳೂ, ಸಕಲ ಪಾಪಪರಿಹಾರಳೂ ಆದ ಗಂಗಾಮಾತೆಯನ್ನೇಕೆ ದೂಷಿಸುವಿ?' ಎಂದು ಮರುಪ್ರಶ್ನಿಸಿದಾಗ, ಜ್ವಾಲೆಯು, 'ಇದರ ಉತ್ತರವನ್ನು ನಿಮ್ಮಲ್ಲಿ ಹೇಳಲು ಸಾಧ್ಯವಿಲ್ಲ. ಗಂಗೆಯು ಪ್ರತ್ಯಕ್ಷಳಾಗಿ ಪ್ರಶ್ನಿಸಿದರೆ ಉತ್ತರಿಸಬಹುದೆಂ'ದಳು. ಇದನ್ನು ತಿಳಿದ ಗಂಗೆಯು ಪ್ರತ್ಯಕ್ಷಳಾಗಿ, 'ಎಲೈ ಜ್ವಾಲೆ, ಏತಕ್ಕಾಗಿ ದೂಷಿಸುವಿ? ನನ್ನನ್ನು ಒಂದು ಕ್ಷಣ ಮಾತ್ರ ಸ್ಪರ್ಶಿಸಿದವನು ಸ್ವರ್ಗಲೋಕಕ್ಕೆ ಹೋಗಲು

ಅರ್ಹೆನಾಗಿರುವಾಗ ನೀನು ಮಾತ್ರ ಈ ರೀತಿ ಹೇಳಲು ಕಾರಣವೇನು?' ಎಂದು ಕೇಳಿದಳು.

ಜ್ವಾಲೆಯು, 'ಗಂಗೆ! ನೀನು ದೋಷರಹಿತಳಾಗಿರುವಿ ನಿಜ. ಆದರೆ, ಪುತ್ರರಿಲ್ಲದ ಸ್ತ್ರೀಯನ್ನು ಮುಟ್ಟಬಾರದೆಂದು ಶಾಸ್ತ್ರವೇ ಸಾರಿರುವಾಗ ನಿನ್ನನ್ನು ಹೇಗೆ ಸ್ಪರ್ಶಿಸಲಿ?' ಎಂದು ಪ್ರಶ್ನಿಸಿದಳು. ಜ್ವಾಲೆಯ ಮಾತಿನಿಂದ ಕುಪಿತಳಾದ ಗಂಗೆಯು, 'ಜಗತ್ತಿನಲ್ಲೇ ಬಲಶಾಲಿಯೂ, ಇಚ್ಛಾಮರಣಿಯೂ ಆದ ಭೀಷ್ಮನನ್ನು ಮರೆತೆಯಾ?' ಎಂದಾಗ ಜ್ವಾಲೆಯು, 'ಭೀಷ್ಮಾಚಾರ್ಯರು ಕೌರವ–ಪಾಂಡವರೊಳಗಿನ ಯುದ್ಧದಲ್ಲಿ ಅರ್ಜುನನಿಂದ ಹತರಾಗಿರುವರು' ಎಂದಳು. ಗಂಗೆಯ ಕೋಪ ಇಮ್ಮಡಿಸಿತು. ತನ್ನ ಮಗನನ್ನು ಕೊಂದ ಅರ್ಜುನನ ಶಿರವು ಇನ್ನಾರು ತಿಂಗಳೊಳಗೆ ಆತನ ಮಗ ಬಭ್ರುವಾಹನನಿಂದ ಕಡಿಯಲ್ಪಡಲಿ ಎಂದು ಶಾಪವಿತ್ತು ಗಂಗೆಯು ಜಲದಲ್ಲಿ ಮಾಯವಾದಳು.

ಸಕಲ ಲೋಕಪಾವನಿಯೂ, ಮಂಗಳತರಂಗಿಣಿಯೂ, ಭಗೀರಥ ತನೂಜೆಯೂ, ಸಗರಾತ್ಮಜಾತ ಮುಕ್ತಿದಾಯಿನಿಯೂ ಆದ ಗಂಗಾದೇವಿಯ ಆಗಮನ ಮಹಾತ್ಮೆಯನ್ನು ವಿಶ್ವಾಮಿತ್ರ ಮುನಿಯು ರಾಮಲಕ್ಷ್ಮಣರಿಗೆ ಬಹು ಚೆನ್ನಾಗಿ ವರ್ಣಿಸಿರುವನು. ಆ ಕಥೆಯು—

ಸೂರ್ಯವಂಶದಲ್ಲಿ ಸಗರ ಚಕ್ರವರ್ತಿ ಎಂಬ ಅರಸನು ಸಪ್ತದ್ವೀಪಾಧಿಪತಿಯಾಗಿ ಇಬ್ಬರು ಪತ್ನಿಯರ ಸಮೇತನಾಗಿ ಬಹಳ ವೈಭವದಿಂದ ಇದ್ದನು ದೊಡ್ಡ ಪತ್ನಿಯಲ್ಲಿ ಅಸಮಂಜಸನೆಂಬ ದುಷ್ಟಪುತ್ರನಿದ್ದು ಅವನಿಗೆ ಅಂಶುಮಂತನೆಂಬ ಪುತ್ರನಿದ್ದನು. ದ್ವಿತೀಯ ಪತ್ನಿಗೆ ಅತುಲ ತೇಜೋವಂತರಾದ, ಪರಾಕ್ರಮಿಗಳಾದ ಅರವತ್ತು ಸಾವಿರ ಪುತ್ರರು ಇದ್ದರು. ಶತಾಶ್ವಮೇಧ ಮಾಡಲು ಆರಂಭಿಸಿದ ಸಗರನು ತೊಂಭತ್ತ-ಒಂಭತ್ತು ಯಾಗಗಳನ್ನು ಪೂರೈಸಿ ನೂರನೇ ಯಾಗಕ್ಕೆ ಅಶ್ವವನ್ನು ಬಿಟ್ಟನು. ಇದರಿಂದ ಸ್ವರ್ಗಾಧಿಪತಿಯಾದ ದೇವೇಂದ್ರನು ಬೆದರಿದನು. ಆತನು ಮಾಯೆಯಿಂದ ಕುದುರೆಯನ್ನು ಅಡಗಿಸಿ, ಪಾತಾಳಲೋಕದಲ್ಲಿ ತಪಸ್ಸುಮಾಡುತ್ತಿರುವ ಸಾಕ್ಷಾದ್ಭೃಗವಂಶಸಂಭೂತನಾದ ಕಪಿಲ ಮುನಿಯ ಹಿಂಭಾಗದಲ್ಲಿ ಕಟ್ಟಿದನು. ಸಗರ ಪುತ್ರರು ತಮ್ಮ ಅಶ್ವವನ್ನು ಭೂಲೋಕದಲ್ಲಿ ಎಲ್ಲಿಯೂ ಕಾಣಲಾರದೆ, ತಮ್ಮ ಉಗುರುಗಳಿಂದ ಭೂಮಿಯನ್ನು ಅಗೆದು ಪಾತಾಳಕ್ಕೆ

ಹೋದರು. ಅಲ್ಲಿ ಅಷ್ಟಾಂಗ ಯೋಗಾಸಕ್ತನಾಗಿ ಕುಳಿತ ಕಪಿಲ ಮಹರ್ಷಿಯ ಹಿಂಗಡೆ ತಮ್ಮ ಅಶ್ವವನ್ನು ಕಂಡು, ಈ ಕಳ್ಳ ಮುನಿಯೇ ಈ ಅಶ್ವವನ್ನಡಗಿಸಿರುವನೆಂದು ನೆನಸಿ, ಮುನಿಯನ್ನು ಹೀನವಚನಗಳಿಂದ ನೋಯಿಸಿದರು. ಸಿಟ್ಟುಗೊಂಡ ಮುನಿಯು ಕಣ್ಣು ತೆರೆದಾಗ ಸಗರಪುತ್ರರೆಲ್ಲರೂ ಭಸ್ಮವಾದರು. ಸಗರನ ಮೊಮ್ಮಗನಾದ ಅಂಶುಮಂತನು ಇದನ್ನು ಕೇಳಿ, ಪಾತಾಳಕ್ಕೆ ಹೋಗಿ, ಕಪಿಲಮುನಿಯ ಕೋಪವನ್ನು ಸಂತೈಸಿ, ಅಶ್ವವನ್ನು ಬೇಡಿಕೊಂಡು ಯಾಗವನ್ನು ಪೂರೈಸಿದನು.

ಅಂಶುಮಂತನಿಗೆ ಭಗೀರಥನೆಂಬ ಮಗನು ಹುಟ್ಟಿದನು. ತಾತಂದಿರ ವೃತ್ತಾಂತವನ್ನು ಕೇಳಿದ ಭಗೀರಥನು ಅವರ ಸದ್ಗತಿಗೋಸ್ಕರ ಕಪಿಲ ಮುನಿಯಲ್ಲಿಗೆ ತೆರಳಿ ಬೇಡಿದನು. ಮುನಿಯ ಅನುಗ್ರಹಕ್ಕೆ ಪಾತ್ರನಾದ ಭಗೀರಥನು ಮುನಿಯ ಮಾತಿನಂತೆ ಸ್ವರ್ಗಕ್ಕೆ ಹೋಗಿ ಗಂಗಾದೇವಿಯನ್ನು ಬೇಡಿಕೊಂಡನು. ಗಂಗೆಯು ಭಕ್ತವತ್ಸಲೆಯಾಗಿ ಕೂರ್ಮ, ಮೀನ, ಕಚ್ಛಪಗ್ರಾಹಾದಿ ಜಲಚರಗಳಿಂದಲೂ, ಫೇನಸಮೂಹಗಳಿಂದಲೂ, ಸ್ತಂಭಗಳೋಪಾದಿಯಲ್ಲಿ, ಇಳಿಯಬೀಳುತ್ತಿರುವ ನೀರಿನ ಹಾವುಗಳಿಂದಲೂ, ಜಲವೆಂಬುವ ಅರಣ್ಯದಲ್ಲಿ ಬೆಳೆದಿರುವ ಬಳ್ಳಿಗಳೋ ಎಂಬಂತೆ ನೇತಾಡುತ್ತಿರುವ ಶೈಲವಾಲಗಳಿಂದಲೂ ರಭಸದಿಂದ ಭೂಮಿಯನ್ನು ಮುಳುಗಿಸುವಳೋ ಎಂಬಂತೆ ಇಳಿಯುಹತ್ತಿದಳು.

ಇವಳ ರಭಸದ ತಡೆಗೆ, ಭಗೀರಥನು ಶಿವನನ್ನು ಮೆಚ್ಚಿಸಿ ಪ್ರತ್ಯಕ್ಷನನ್ನಾಗಿ ಮಾಡಿ, ತನ್ನ ಕಾರ್ಯದ ವಿಚಾರ ಬೇಡಿಕೊಂಡನು. ಶಿವನು ಭಗೀರಥನಿಗೆ ಅಭಯವಿತ್ತು, ರಭಸದಿಂದ ಇಳಿಯುವ ಗಂಗೆಯನ್ನು ತನ್ನ ಜಟೆಯಲ್ಲಿ ಅಡಗಿಸಿ ಸುಮ್ಮನಾದನು. ಭಗೀರಥನು ಮತ್ತೆ ಶಿವನನ್ನೂ ಮೆಚ್ಚಿಸಿದನು. ಈ ತಪಸ್ಸಿಗೆ ಮೆಚ್ಚಿದ ಶಂಭು ಜಟೆಯಲ್ಲಿ ಅಡಗಿಸಿದ ಗಂಗೆಯನ್ನು ಭೂಮಿಗೆ ಇಳಿಯಬಿಟ್ಟನು. ಪ್ರವಾಹರೂಪವಾಗಿ ಗಂಗೆಯು ಹಿಮಾಲಯದ ಶಿರಸ್ಸಿನಲ್ಲಿ ಬಿದ್ದಳು. ಅಲ್ಲಿಂದ ಏಳು ಭಾಗಗಳಾಗಿ ಮೂರು ಭಾಗಗಳು ಪಡುವಲ ದಿಕ್ಕಿಗೂ, ಮೂರು ಭಾಗಗಳು ಪೂರ್ವಕ್ಕೂ, ಒಂದು ಭಾಗವು ಭಗೀರಥನ ಹಿಂದೆಯೂ ಹರಿದುವು.

ಭಗೀರಥನನ್ನು ಅನುಸರಿಸಿ ಬಂದ ಗಂಗೆಯು ಜಹ್ನು ಮಹಾಮುನಿಯು ಯಾಗಮಾಡುತ್ತಿದ್ದ ಯಜ್ಞಶಾಲೆಯಲ್ಲಿ, ಬ್ರಹ್ಮ ಋತ್ವಿಕ್ಕು

ಮೊದಲಾದವರು ಕೂಡಿರುವಾಗ ನುಗ್ಗಲು, ಕೋಪಗೊಂಡ ಮುನಿಯು ತಪಶ್ಶಕ್ತಿಯಿಂದ ಗಂಗೆಯನ್ನು ಕೈಗೆ ತೆಗೆದುಕೊಂಡು, ಆಪೋಶನಮಾಡಿ ಬಿಟ್ಟನು. ಭಗೀರಥನು ಇದನ್ನು ಕಂಡು ಬಹು ದುಃಖಿತನಾದನು. ಜಹ್ನುವಿನಲ್ಲಿ ಬೇಡಿದನು. ತೃಪ್ತಿಗೊಂಡ ಮುನಿಯು ಕರ್ಣಮಾರ್ಗದಿಂದ ಹೊರಗೆ ಬಿಡಲು, ಅಲ್ಲಿಂದ "ಜಾಹ್ನವಿ" ಎಂಬ ಹೆಸರು ತಾಳಿದ ಗಂಗೆಯು ಭಗೀರಥನ ಹಿಂದೆಯೇ ಪಾತಾಳಕ್ಕೆ ಹೋಗಿ ಸಗರಪುತ್ರರ ಭಸ್ಮದ ಮೇಲೆ ಹರಿದು, ಸದ್ಗತಿಯನ್ನು ದೊರಕುವಂತೆ ಮಾಡಿದಳು.

ಸಗರಪುತ್ರರಿಂದ ಅಗೆಯಲ್ಪಟ್ಟದ್ದರಿಂದ ಸಮುದ್ರಕ್ಕೆ ಸಾಗರ ಎಂಬ ಹೆಸರು ಬಂತು.

ಈ ಗಂಗೆಗೆ ಭೀಷ್ಮಾಚಾರ್ಯರು ಜನಿಸಿದ ಕಥೆಯು ಇಂತಿದೆ:

ಲಯಕರ್ತನಾದ ಈಶನು ಒಮ್ಮೆ ಬೆಳ್ಳಿಬೆಟ್ಟದಲ್ಲಿ ಪಾರ್ವತಿಯೊಂದಿಗೆ ವಿರಾಜಮಾನನಾಗಿದ್ದನು. ಜಗತ್ತಿನಲ್ಲಿ ಪ್ರಸಿದ್ಧಹೊಂದಿದ ಆ ಕೈಲಾಸ ಪರ್ವತವು ತಮಾಲ, ತಾಲ, ಹಿಂತಾಲ, ಕುರುವಕ, ಮರುವಕ, ಮಂಜುಳ, ಕುಂದ, ಮಾಕಂದ, ತಿಂದುಕ, ಚಾಂಪೇಯ, ಚಂಪಕ, ಫನಸ, ಪಾಟಲ, ಪ್ರಿಯಂಗು, ನಾರಿಕೇಳ, ಲವಂಗ, ಕದಂಬ, ಕೇತಕಿ, ಕಪಿತ್ಥ, ಜಂಬೂ, ಅಶ್ವತ್ಥ, ಜಂಬೀರ, ಅಮ್ರ, ಕ್ರಮುಕ, ಪ್ರಿಯಾಳು, ಸ್ಯಂದನ ಮೊದಲಾದ ಚಿಗುರು ಬಂದ ನಂದನೋದ್ಯಾನದಿಂದ ಮತ್ತಷ್ಟು ಕಂಗೊಳಿಸುತಿತ್ತು. ಸಂಪಗೆ, ಮಲ್ಲಿಗೆ, ಸೇವಂತಿಗೆ, ಗಿರಿಮಲ್ಲಿಗೆಯ ಪರಿಮಳವಂತೂ ಶಿವ ಪಾರ್ವತಿಯರಿಗೆ ಮತ್ತಷ್ಟು ಆನಂದವನ್ನುಂಟುಮಾಡಿತ್ತು.

ಅಂದು ಮಹಾಸಭೆ ಕೂಡಿತ್ತು. ವಿಷ್ಣು, ನಂದೀಶ್ವರ, ಭೃಂಗೀಶ್ವರ, ನಾರದ, ಸಿದ್ಧ, ಸಾಧ್ಯರು, ಯಕ್ಷ, ಕಿನ್ನರ, ಕಿಂಪುರುಷ, ಗರುಡ, ಗಂಧರ್ವರು, ಮಹಾಯೋಗಿಗಳು, ಊರ್ವಶಿ, ರಂಭೆ ಮೊದಲಾದ ನಾನಾ ಸಂಗೀತ ನಾಟ್ಯದವರು ಕುಳಿತಿದ್ದರು. ಶಿವನು ಅತ್ತಿತ್ತ ನೋಡುತ್ತ, ದೇವಲೋಕದ ಈ ಸಭೆಯಲ್ಲಿ ಗಂಗಾದೇವಿಯನ್ನು ಕಾಣದೆ, ಆಕೆಯನ್ನು ಬರಹೇಳಿದನು.

ಅವಸರದಿಂದ ಗಂಗಾದೇವಿಯು ಬರುತ್ತಿರುವ ವೇಳೆಯಲ್ಲಿ ಆಕೆ ಉಟ್ಟಿರುವಂಥ ಸೀರೆಯು ಸಡಲಿ, ಧರೆಗೆ ಬೀಳುವುದೂ ಬ್ರಹ್ಮನು ಬರುವುದೂ ಸರಿಹೋಯಿತು. ಗಂಗೆಯನ್ನು ಕಂಡ ಬ್ರಹ್ಮನು, 'ನೀನು ಭೂಲೋಕಕ್ಕೆ

ಹೋಗಿ, ಮಾನವನಿಗೆ ಹೆಂಡತಿಯಾಗಿ ಅಷ್ಟಪುತ್ರರನ್ನೂ ಪಡೆ' ಎಂದು ಶಾಪವಿತ್ತು, ಪರಮೇಶ್ವರನ ಸಭೆಗೆ ಚಿತ್ತೈಸಿದನು.

ದುಃಖಿತಳಾದ ಗಂಗೆಯು ಪರಮೇಶ್ವರನ ಸಭೆಗೆ ಹೋಗದ್ದರಿಂದ, ಶಿವನು ಸಭೆಯನ್ನು ಸಂಕ್ಷೇಪವಮಾಡಿ ಆ ಮೇಲೆ ತಾನೊಬ್ಬನೆ ಏಕಾಂಗಿಯಾಗಿ ಕುಳಿತಿರುವ ವೇಳೆಯಲ್ಲಿ ಗಂಗಾದೇವಿಯು ಬಂದು ಶಿವನಿಗೆ ಅಡ್ಡಬಿದ್ದು ಶಾಪದ ವಿಚಾರವನ್ನು ಹೇಳಿ, ಕಾಪಾಡಬೇಕೆಂದು ಬೇಡಿಕೊಂಡಳು. ಶಿವನು ಗಂಗೆಗೆ, ಬ್ರಹ್ಮನಿತ್ತ ಶಾಪವು ಹುಸಿಯಾಗದು. ಆದರೆ, ನೀನು ಭೂಲೋಕಕ್ಕೆ ಹೋಗಿ ಮಾನವನಿಗೆ ಪತ್ನಿಯಾಗಿರುವಾಗ,ನಿನ್ನ ಪತಿಯು ನಿನಗೆ ಮಾರುತ್ತರವನ್ನು ಕೊಟ್ಟರೆ ಆ ಕ್ಷಣವೇ ನಿನ್ನ ಶಾಪವಿಮೋಚನೆಯಾಗುವುದೆ"ಂದು ಆಶ್ವಾಸನೆಯಿತ್ತು ಕಳುಹಿಕೊಟ್ಟನು.

ಆ ಕ್ಷಣವೇ ಗಂಗೆಯು ಭೂಲೋಕಕ್ಕೆ ಬಂದು, ನದಿಯೊಳಗಿನ ಬಂಡೆಯ ಮೇಲೆ ಕುಳಿತು ತಪಸ್ಸನ್ನಾಚರಿಸಿದಳು. ಒಂದು ದಿನ ಹಸ್ತಿನಾಪುರವನ್ನು ಆಳುತ್ತಿದ್ದ ಶಂತನು ಚಕ್ರವರ್ತಿಯು ಭಾಗೀರಥಿಯಲ್ಲಿ ಜಲಕ್ರೀಡೆಯಾಡಲು ಬರುತ್ತಿರುವ ವೇಳೆ, ತಪಸ್ಸಿಗೆ ಕುಳಿತ ಗಂಗೆಯನ್ನು ಕಂಡು ಮೋಹಪರವಶನಾಗಿ, ಆಕೆಯೊಡನೆ, "ಸುಂದರಿ! ನೀನು ಯಾರು? ಹಸ್ತಿನಾಪುರದ ಅರಸನಾದ ನನ್ನೊಡನೆ ಬಂದು, ನನ್ನ ಪಟ್ಟದರಸಿಯಾಗುವಿಯಾ?" ಎಂದು ಕೇಳಿದನು. ಅದಕ್ಕೆ ಗಂಗೆಯು, "ನಾನು ಶಾಪಹೊಂದಿದ ದೇವಲೋಕದ ಗಂಗಾದೇವಿ ನಾನು ಕೈಹಿಡಿದ ಗಂಡನು ನನಗೆ ಎದುರುತ್ತರ ಕೊಟ್ಟರೆ ನನ್ನ ಶಾಪವಿಮೋಚನೆಯಾಗುವುದು. ಎದುರುತ್ತರ ಕೊಡದಿದ್ದಲ್ಲಿ ನಾನು ಎಷ್ಟೋ ಕಾಲ ಇರಬಲ್ಲೆನು" ಎಂದು ಉತ್ತರವಿತ್ತಳು.

ಶಂತನು ಇದನ್ನು ಕೇಳಿ, "ನೀನು ಏನುಮಾಡಿದರೂ ಉತ್ತರ ಹೇಳಲಾರೆನೆಂದು ತ್ರಿಕರಣಶುದ್ಧಿಪೂರ್ವಕವಾಗಿ ಪ್ರಮಾಣ ಮಾಡಬೇಕು" ಎಂದನು. ಇದಕ್ಕೊಪ್ಪಿದ ಗಂಗೆಯು ಪ್ರಮಾಣಮಾಡಿದಳು. ಶಂತನು ಅನಂತರ ಗಂಗೆಯನ್ನು ಮಹಾಸಂಭ್ರಮದಿಂದ, ಮದುವೆಯಾಗಿ ಪಟ್ಟಣವನ್ನು ಶೃಂಗರಿಸಿ,ವೈಭವದಿಂದ- ಸಂತೋಷದಿಂದ ರಾಜ್ಯವಾಳಿಕೊಂಡಿದ್ದನು.

ಸುಖದಿಂದ ಇದ್ದ ಗಂಗಾದೇವಿಯು, ಗರ್ಭಧರಿಸಿದಳು. ಮಗು ಜನಿಸಿದಾಕ್ಷಣ ಗಂಗೆಯು ಅದನ್ನೆತ್ತಿ ಬಂಡೆಗೆ ಅಪ್ಪಳಿಸಿದಳು. ಮಾರುತ್ತರವಿತ್ತಲ್ಲಿ ಗಂಗೆಯು ದೇವಲೋಕಕ್ಕೆ ಹೋದಾಳೆಂಬ ಶಂಕೆಯಿಂದ ಶಂತನು

ಈ ವಿಚಾರದಲ್ಲಿ ಮಾತನ್ನೆತ್ತಲಿಲ್ಲ. ಈ ರೀತಿ ಏಳು ಸಲವೂ ಗಂಗೆಯು, ಹುಟ್ಟಿದ ಶಿಶುವನ್ನು ಬಂಡೆಗಪ್ಪಳಿಸಿದರೂ ಶಂತನು ಮಾರುತ್ತರವೀಯದೆ ಸುಮ್ಮನೆ ಇದ್ದನು. ಗಂಗೆಯು ಕೊನೆಗೆ ಎಂಟನೇ ಗರ್ಭ ಧರಿಸಿದಳು. ಬ್ರಹ್ಮದೇವನಿಗೂ ಗಂಗೆಯ ಮೇಲೆ ಕರುಣೆ ಬಂದು ಹುಟ್ಟಿದ ಮಗುವು ಚಿರಂಜೀವಿಯಾಗಲೆಂದು ಹರಸಿದನು.

ಎಂಟನೇ ಮಗುವು ಜನಿಸಿದಾಕ್ಷಣ ಗಂಗೆಯು ಮಗುವನ್ನೆತ್ತಿ ಬಂಡೆಗೆ ಅಪ್ಪಳಿಸಲು ಸಿದ್ಧಳಾದಳು. ಆ ತನಕ ಸುಮ್ಮನಿದ್ದ ಶಂತನು, ಗಂಗೆಯನ್ನು ಕುರಿತು, "ಈ ರೀತಿ ನೀನೇಕೆ ಮಗುವನ್ನು ಬಂಡೆಗಪ್ಪಳಿಸಿ ನಮ್ಮ ಸಂತಾನವನ್ನು ಕೊನೆಗಾಣಿಸುವೆ? ನಮ್ಮ ರಾಜ್ಯಕ್ಕೆ ಹಕ್ಕುದಾರನೋರ್ವನು ಬೇಡವೆ?" ಎಂದು ಪ್ರಶ್ನಿಸಲು, ಗಂಗೆಯು ಕುಪಿತಳಾಗಿ, "ನಮ್ಮ ಪ್ರಮಾಣಕ್ಕೆ ವಿರುದ್ಧವಾಗಿ ನುಡಿದ ನಿನ್ನ ಸಂತಾನದ ಸಮಾಪ್ತಿಯಾಗಲಿ! ನಾನು ಇನ್ನು ನಿನಗೆ ದೊರಕಲಾರೆನು!" ಎಂದು ಶಾಪವಿತ್ತು, ನೀರಾಗಿ ಹರಿದುಹೋದಳು. ದುಃಖಿತನಾದ ಶಂತನು, ಮಗುವನ್ನೆತ್ತಿ ಮುದ್ದಿಟ್ಟು, ಭೀಷ್ಮಾಚಾರ್ಯ ಎಂಬ ಹೆಸರನ್ನಿತ್ತು, ರಾಜರಿಗೀಯುವ ಸಕಲ ಶಿಕ್ಷಣವನ್ನೂ ಕೊಡಿಸಿದನು. ಹೀಗಿದೆ ಗಂಗೆಯ ಪುತ್ರ ಭೀಷ್ಮಾಚಾರ್ಯರ ಜನನದ ಕತೆ.

ಶೂದ್ರನೆಂದು ಹೀನೈಸಿ ನುಡಿದ ಓರ್ವ ಬ್ರಾಹ್ಮಣನಿಗೆ ಸಂತ ತುಲಸೀದಾಸರು ಗಂಗೆಯ ಉದಾಹರಣೆಯನ್ನಿತ್ತು, ಬ್ರಾಹ್ಮಣನ ಅಜ್ಞಾನವನ್ನು ಹೋಗಲಾಡಿಸಿದ ಕತೆಯೊಂದು ಪ್ರಸಿದ್ಧವಿದೆ. ನೂರ ಐವತ್ತು ವರುಷಗಳ ಕೆಳಗೆ ಕಾನ್‌ಪುರದಲ್ಲಿ ಗಂಗಾತೀರದಲ್ಲಿ ಓರ್ವ ಆಚಾರಶೀಲ ಬ್ರಾಹ್ಮಣನು ತನ್ನ ದೇಹದ ಮೇಲೆ ಶೂದ್ರನು ನೀರು ಹಾರಿಸಿದನೆಂದು ಕೋಪೋದ್ದೀಪಿತನಾಗಿ ಆ ಶೂದ್ರನನ್ನು ಬಡಿಯಲುಹೋದನು. ಸಂತ ತುಲಸೀದಾಸರು ಅದೇ ವೇಳೆಗೆ ಅಲ್ಲಿ ಸ್ನಾನಮಾಡುತ್ತಿದ್ದರು. ಅವರಿಗೆ ಇದನ್ನು ನೋಡಿ, ಬಹಳ ವ್ಯಸನವಾಯಿತು. ಬಡಪಾಯಿಯಾದ ಶೂದ್ರನು ಲಜ್ಜೆ-ಭಯಗಳಿಂದ ನಡುಗುತ್ತಿದ್ದನು. ತುಲಸೀದಾಸರು ಬ್ರಾಹ್ಮಣನ ಕೋಪಕ್ಕೆ ಕಾರಣ ಕೇಳಲು, ಅವನು "ಇವನು ಭಗವಂತನ ಪಾದಗಳಲ್ಲಿ ಹುಟ್ಟಿದವನು. ಆದುದರಿಂದ ನಿಕೃಷ್ಟನಾಗಿರುವನು. ಇವನು ನನ್ನನ್ನು ಅಪವಿತ್ರಗೊಳಿಸಿರುವನು" ಎಂದನು. ಆಗ ತುಲಸೀದಾಸರು ಈ ರೀತಿ ಕೇಳಿದರು: "ತಾವು ಗಂಗೆಯಲ್ಲಿ ಸ್ನಾನಮಾಡಲು ಏಕೆ ಬಂದಿರಿ?"